2) ಈ ಬ್ಯಾಂಕಿಗೆ, ತಾಲ್ಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳು ದಿ: 31.03.2004ಕ್ಕೆ ಕೊಡಬೇಕಾಗಿರುವ ಸಾಲ ಮತ್ತು ಬಡ್ಡಿಯ ವಿವರಗಳೇನು?

3) ಎಲ್ಲಾ ಭೂ ಅಭಿವೃದ್ಧಿ ಅಥವಾ ಕೃಷಿ ಅಭಿವೃದ್ಧಿ ಬ್ಯಾಂಕುಗಳನ್ನು ರಾಜ್ಯ ಅಪೆಕ್ಸ್ ಬ್ಯಾಂಕ್ ಹಾಗೂ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಲ್ಲಿ ವಿಲೀನಗೊಳಿಸಿ ದೀರ್ಘಾವಧಿ ಸಾಲ ಕೊಡುವುದನ್ನು ಸಹ ಅವುಗಳಿಗೆ ವಹಿಸಿಕೊಡಲು ಕ್ರಮ ಜರುಗಿಸುವರೇ?

ಶ್ರೀ ಆರ್.ವಿ.ದೇಶಪಾಂಡೆ (ಸಹಕಾರ ಸಚಿವರು):

1) ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ದಿ: 31.03.2004ಕ್ಕೆ ರೂ.201.72 ಕೋಟಿ ಸಂಚಿತ ನಷ್ಟ ಹೊಂದಿದೆ.

ರಾಜ್ಯ ಬ್ಯಾಂಕು ಶೃಂಗ ಬ್ಯಾಂಕಾಗಿದ್ದು, ಕೇಂದ್ರ ಕಛೇರಿ ಹಂತದಲ್ಲಿ ಜಿಲ್ಲಾ ಶಾಖೆಗಳನ್ನೊಳಗೊಂಡಂತೆ ಒಟ್ಟಾರೆ ಲಾಭ ಹಾನಿಯ ಲೆಕ್ಕಾಚಾರ ಮಾಡಲಾಗುತ್ತಿದ್ದು, ಜಿಲ್ಲಾವಾರು ಲಾಭ–ಹಾನಿ ತಃಖ್ತೆಗಳನ್ನು ಮಾಡುತ್ತಿರುವುದಿಲ್ಲ.

ರಾಜ್ಯದಲ್ಲಿನ 177 ಪ್ರಾಥಮಿಕ ಬ್ಯಾಂಕುಗಳ ಪೈಕಿ 167 ಪ್ರಾಥಮಿಕ ಬ್ಯಾಂಕುಗಳು ಒಟ್ಟು ರೂ.591.88 ಕೋಟಿಯ ಸಂಚಿತ ನಷ್ಟ ಹೊಂದಿವೆ. ಉಳಿದ 10 ಪ್ರಾಥಮಿಕ ಬ್ಯಾಂಕುಗಳು ಲಾಭದಲ್ಲಿವೆ.

2) ರಾಜ್ಯ ಬ್ಯಾಂಕಿಗೆ, ತಾಲ್ಲೂಕು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳು ದಿನಾಂಕ: 31.03.2004ಕ್ಕೆ ಕೊಡಬೇಕಾಗಿರುವ ಸಾಲ ರೂ.1333.17 ಕೋಟಿ ಇದ್ದು ಮತ್ತು ಬಡ್ಡಿ ರೂ.114.22 ಕೋಟಿಗಳಷ್ಟು ಅಲ್ಲದೇ ಮುಂದುವರೆದ ಬಡ್ಡಿ ರೂ.31.70ಕೋಟಿ ಬರಬೇಕಾಗಿದೆ.

3) ಇಂತಹ ಪ್ರಸ್ತಾವ ಯಾವುದೂ ಸರ್ಕಾರದ ಮುಂದೆ ಇರುವುದಿಲ್ಲ.

1462(327) ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ (ಬ್ಯಾಡಗಿ) ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿನ ಪಡಿತರ ವ್ಯವಸ್ಥೆ ಅಡಿಯಲ್ಲಿ ಹಳದಿ ಕಾರ್ಡ್‌ಗಳ ವಿತರಣೆ ಕುರಿತಾಗಿ ಗೊಂದಲ ಉಂಟಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಗೊಂದಲ ನಿವಾರಣೆಯ ಕುರಿತು ಸರಕಾರ ಕೈಗೊಂಡ ಕ್ರಮಗಳೇನು;

ಇ) ಹಳದಿ ಕಾರ್ಡ್‌ಗಳ ಕೊರತೆಯಿದ್ದರೂ ಬಡವರಿಗೆ ವಿತರಿಸಿದ ಕಾರ್ಡ್‌ಗಳನ್ನು ಹಿಂದಕ್ಕೆ ಪಡೆಯುತ್ತಿರುವುದು ನ್ಯಾಯ ಸಮಂಜಸವೇ;

ಈ) ಈ ರೀತಿ ಕಾರ್ಡುಗಳನ್ನು ಹಿಂದಕ್ಕೆ ಪಡೆಯಲಾದ ಸಂಖ್ಯೆಯೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

ಉ) ಅರ್ಹ ಕುಟುಂಬಗಳಿಗೆ ಕೂಡಲೇ ಹಳದಿ ಕಾರ್ಡುಗಳನ್ನು ವಿತರಿಸಲು ಸರಕಾರ ಕೈಗೊಂಡ ಕ್ರಮಗಳೇನು;

ಊ) ಈ ಹಳದಿ ಕಾರ್ಡ್‌ಗಳಲ್ಲಿನ ಪದ್ಧತಿಗಳನ್ನು ಬದಲಾಯಿಸಿ ಹಿಂದೆ ಜಾರಿಯಲ್ಲಿದ್ದ ಯುನಿಟ್ ಪದ್ಧತಿಯನ್ನು ಜಾರಿಗೆ ತರುವ ವಿಚಾರ ಸರಕಾರದ ಮುಂದಿದೆಯೇ?

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಹೌದು

ಆ) ಹಳದಿ ಪಡಿತರ ಚೀಟಿಗಳ ಗೊಂದಲ ನಿವಾರಣೆಗಾಗಿ ಸರಕಾರವು ತನ್ನ ಆದೇಶ ಸಂ.ಅನಾಸ 114 ಡಿಆರ್‌ಎ 04 ದಿನಾಂಕ 10.1.2005ರ ಆದೇಶದಲ್ಲಿ ಜನವರಿ 2005 ಮಾಹೆಯಿಂದ ಮನೆ ಮನೆ ಪುನರ್ ಸಮೀಕ್ಷಾ ಕಾರ್ಯ ಪ್ರಾರಂಭಿಸಿದ್ದು, ಸಮೀಕ್ಷೆಯು ಏಪ್ರಿಲ್ 2005ಕ್ಕೆ ಅಂತ್ಯಗೊಳ್ಳಲಿದೆ. ನಂತರ ಫಲಾನುಭವಿಗಳ ಪಟ್ಟಿಯನ್ನು ಗ್ರಾಮಸಭೆ ಹಾಗೂ ವಾರ್ಡ್‌ಸಭೆಗಳಲ್ಲಿಟ್ಟು ಅನುಮೋದನೆ ಪಡೆದು ನಂತರ ಅರ್ಹ ಕುಟುಂಬಗಳಿಗೆ ಪಡಿತರ ಚೀಟಿ ವಿತರಿಸಲಾಗುವುದು.

ಇ) ಇಲ್ಲಾ, ಅನರ್ಹ ಬಿ.ಪಿ.ಎಲ್. ಪಡಿತರ ಚೀಟಿಗಳನ್ನು ಮಾತ್ರ ರದ್ದುಗೊಳಿಸಲಾಗುತ್ತಿದೆ.

ಈ) ಈ ರೀತಿ ರದ್ದುಗೊಳಿಸಲಾಗಿರುವ ಹಳದಿ ಪಡಿತರ ಚೀಟಿಗಳ ಸಂಖ್ಯೆ 854583 (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ–1ರಲ್ಲಿ ಲಗತ್ತಿಸಲಾಗಿದೆ).

ಉ) ಅಂಶ (ಅ) ದಲ್ಲಿ ನೀಡಿದಂತೆ

ಊ) ಸದ್ಯಕ್ಕೆ ಇಲ್ಲ.

ANNEXURE

SL.NO.	Name of the District	BPL Cards
1	Bangalkote	54922
2	Bangalore IRA	34349
3	Bangalore R	48548
4	Bangalore U	31969
5	Belgaum	44129
6	Bellary	13475
7	Bidar	4987
8	Bijapur	16868
9	Chamrajnagar	23181
10	Chikmagalur	44168
11	Chitradurga	16086
12	Dakshina Kannada	15389
13	Davangere	44127
14	Dharwad	36116
15	Gadag	26289
16	Gulbarga	21683
17	Hassan	25093
18	Haveri	31320

19	Kodagu	15000
20	Kolar	50282
21	Koppal	18850
22	Mandya	17179
23	Mysore	37793
24	Raichur	42615
25	Shimoga	25509
26	Tumkur	52125
27	Udupi	3995
28	Uttara Kannada	58115
	Total	854583

1463(782) ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ (ಬ್ಯಾಡಗಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಎರಡು ವರ್ಷಗಳ ಹಿಂದೆ ಅಪೆಕ್ಸ್ ಬ್ಯಾಂಕಿನಿಂದ ರಾಜ್ಯದ ಆಯವ್ಯಯ ಭಾಷಣದಲ್ಲಿ ರಾಜ್ಯದ ರೈತರಿಗೆ ಶೇಕಡಾ 9ರ ಬಡ್ಡಿಯಂತೆ ಸಾಲ ಕೊಡವುದಾಗಿ ಭರವಸೆ ನೀಡುವುದು ನಿಜವೇ?

2) ಆ ಪ್ರಕಾರ ರಾಜ್ಯದ ಎಷ್ಟು ಜನ ರೈತರಿಗೆ ಅಪೆಕ್ಸ್ ಬ್ಯಾಂಕಿನಿಂದ ನೇರವಾಗಿ ಸಾಲ ಕೊಡಲಾಗಿದೆ?

3) ಕೊಟ್ಟ ಸಾಲದ ಮೊತ್ತ ಎಷ್ಟು (ವಿವರ ನೀಡುವುದು)?

ಶ್ರೀ ಆರ್.ವಿ.ದೇಶಪಾಂಡೆ (ಸಹಕಾರ ಸಚಿವರು):

ಅ) ಹೌದು, ಮಾನ್ಯ ಮುಖ್ಯಮಂತ್ರಿಗಳು 2002–03ನೇ ಸಾಲಿನ ರಾಜ್ಯದ ರೈತರುಗಳಿಗೆ ಕೃಷಿ ಸಾಲ ಸೌಲಭ್ಯಗಳನ್ನು ಶೇಕಡಾ 9ಕ್ಕೆ ಮೀರದಂತೆ ಬಡ್ಡಿ ವಿಧಿಸಲು ಅನುಕೂಲವಾಗುವಂತೆ ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿನಿಂದ ನೇರವಾಗಿ ರಾಜ್ಯದ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಸಾಲವನ್ನು ನೀಡುವ ಬಗ್ಗೆ ಪ್ರಸ್ತಾಪ ಮಾಡಲಾಗಿರುತ್ತದೆ. ಆಪೆಕ್ಸ್ ಬ್ಯಾಂಕು ಕೆಲವು ಆಯ್ದ ಪ್ರಾಥಮಿಕ ಸಹಕಾರ ಸಂಘಗಳಿಗೆ ಈ ಯೋಜನೆ ಪ್ರಾರಂಭಿಸಿದ್ದು, ಅಪೆಕ್ಸ್ ಬ್ಯಾಂಕು ತನ್ನ ಶಾಖೆಗಳನ್ನು ಕೇವಲ ಬೆಂಗಳೂರಿನಲ್ಲಿ ಮಾತ್ರ ಹೊಂದಿರುವುದರಿಂದ ಈ ಯೋಜನೆಯನು ಅನುಷ್ಠಾನಗೊಳಿಸಲು ಸಾಧ್ಯವಾಗಿಲ್ಲ. ಅಪೆಕ್ಸ್ ಬ್ಯಾಂಕ್ ನೇರವಾಗಿ ಸಾಲ ವಿತರಣೆ ಮಾಡಿದಲ್ಲಿ ಕೃಷಿ ಪತ್ತಿನ ರಚನೆ, ಬಡ್ಡಿದರ, ಆಡಳಿತಾತ್ಮಕ ವ್ಯವಸ್ಥೆಯ ಮೇಲೆ? ತೀವ್ರತರವಾದ ಪರಿಣಾಮ ಉಂಟಾಗುತ್ತದಲ್ಲದೆ ಭಾರತೀಯ ರಿಸರ್ವ್ ಬ್ಯಾಂಕು ಡೆಪ್ಯುಟಿ ಗವರ್ನರ್ ಜಗದೀಶ್ ಕಪೂರ್‌ರವರ ನೇತೃತ್ವದಲ್ಲಿ ರಚಿಸಲಾಗಿದ್ದ ಸಮಿತಿಯು ಸಹ ಹಾಲಿ ಇರುವ ಮೂರು ಹಂತಗಳ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋಗಲು ಶಿಫಾರಸ್ಸು ಮಾಡಿರುತ್ತದೆ.

2) ಆಪೆಕ್ಸ್ ಬ್ಯಾಂಕು ರೈತರಿಗೆ ನೇರ ಸಾಲ ಕೊಟ್ಟಿರುವುದಿಲ್ಲ.

3) ಉದ್ಭವಿಸುವುದಿಲ್ಲ.